ಲೇಖನ 01

# ಮಂಗನಿಂದ ಮಾನವ ಸಹಬಾಳ್ವೆ...!

ಮಂಡಕಳ್ಳಿ ಗ್ರಾಮ, ಮೈಸೂರಿನಿಂದ ೧೪ ಕಿಮೀ ದಕ್ಷಿಣ ದಿಕ್ಕಿಗಿರುವ ಒಂದು ಸುಂದರ ಹಳ್ಳಿ. ಊರಿನ ಮುಂದೆ ವಿಶಾಲವಾದ ಕೆರೆ, ಇದನ್ನು ಶೆಟ್ಟಿಕೆರೆ ಅಥವಾ ಮಂಡಕಳ್ಳಿ ಕೆರೆ ಎಂದು ಕರಿಯುತ್ತಾರೆ. ಈ ಕೆರೆ ಹಲವು ಭಿನ್ನ ವಿಭಿನ್ನ ಪಕ್ಷಿ ಸಂಕುಲಗಳ ಆವಾಸಸ್ಥಾನ. ಊರಿನ ಪಕ್ಕದಲ್ಲಿ ಚಿಕ್ಕದಾದ ಮೈಸೂರು ವಿಮಾನ ನಿಲ್ದಾಣ. ತೆಂಗು, ಅಡಿಕೆ, ಭತ್ತ ಇತ್ಯಾದಿ ಇಲ್ಲಿ ಬೆಳೆಯುವ ಪ್ರಮುಖ ಬೆಳೆ. ಭತ್ತದ ನಾಟಿ ಸಂದರ್ಭದಲ್ಲಿ ಈ ಹಳ್ಳಿಯ ಸೊಬಗು ಇನ್ನಷ್ಟು ಚೆಂದ, ಹಸಿರ ಹೊದಿಕೆಯ ಮಾಟ ಕಣ್ಣಿಗೆ ಹಿತ. ಈ ಸೊಬಗನ್ನು ಸವಿಯಲು ಆಗ್ಗಾಗೆ ಒಂದು ಬಾನೆಟ್ ಕೋತಿಯ ಗುಂಪು ಸಹ ಬರುತ್ತದೆ, ಆದರೆ ಬೇರೆ ಜಿಲ್ಲೆ, ಸ್ಥಳಗಳಿಗೆ ಹೋಲಿಸಿದರೆ ಇಲ್ಲಿನ ಜನರು ಕೋತಿಗಳನ್ನು ಕೇವಲ ಬೆಳೆ ನಾಶ ಮಾಡುವ ಪ್ರಾಣಿಗಳೆಂದು ಭಾವಿಸದೆ ಆಂಜನೇಯನ ಅವತಾರವೆಂದು ತಿಳಿದಿದ್ದಾರೆ.




ಚಿತ್ರ ಕೃಪೆ: :- ಸೂರಜ್ ಎನ್

ತಮ್ಮ ತೋಟದ ತೆಂಗು, ಅಡಿಕೆ, ಬಾಳೆ, ಭತ್ತಗಳನ್ನು ಕೋತಿಗಳು ತಿಂದರು, ನಾಶ ಪಡಿಸಿದರೂ ಇಲ್ಲಿನ ಜನ ಅವಕ್ಕೆ ತೊಂದರೆಯೇ ಕೊಡುವುದಿಲ್ಲ. ಮಗುವಿನ ತುಂಟತನವನ್ನು ತಾಯಿ ಸಹಿಸಿಕೊಳ್ಳುವ ಹಾಗೆ ಈ ರೈತರು ಸಹ ಕೋತಿಗಳ ಚೇಷ್ಟೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ತದ್ವಿರುದ್ಧವೆಂಬಂತೆ ಇತ್ತೀಚಿಗೆ ಚಾಮರಾಜನಗರ ಜಿಲ್ಲೆಯ, ಗುಂಡ್ಲಪೇಟೆ ತಾಲೂಕಿನ "ಕಂದೇಗಾಲ" ಎಂಬ ಗ್ರಾಮದ ಬಳಿ ೧೮ ಬಾನೆಟ್ ಕೋತಿಗಳನ್ನು ವಿಷಪ್ರಾಶನದಿಂದ ಕೊಂದ್ದಿದಾರೆ. ಈ ರೀತಿ ಕೋತಿಗಳ ಮಾರಣಹೋಮ ಇದೆ ಮೊದಲಲ್ಲ, ಮಲೆನಾಡಿನ ಹಲವು ಭಾಗಗಳಲ್ಲಿ ಈ ರೀತಿಯ ಪ್ರಕರಣಗಳು ವರದಿಯಾಗಿವೆ.

ಸಿದ್ದಯ್ಯ, ಸುಮಾರು ೬೦ ವರ್ಷ, ಓದಿದ್ದು ೪ನೇ ತರಗತಿಯವರಿಗೆ, ಮಂಡಕಳ್ಳಿ ನಿವಾಸಿ, ಉದ್ಯೋಗ ಕೃಷಿ.

ಮುಂಜಾನೆಯ ಸುಂದರ ಹಳ್ಳಿಯ ವಾತಾವರಣ, ಸುಯ್ಯನೆ ಬೀಸುವತಂಗಾಳಿ, ಪ್ರತಿದಿನದಂತೆ ಸಿದ್ದಯ್ಯ ತನ್ನ ತೋಟಕ್ಕೆ ಭೇಟಿ ನೀಡುತ್ತಾನೆ. ತನ್ನ ತೋಟದಲ್ಲಿ ಒಂದು ಬೀದಿ ನಾಯಿ ಕೋತಿ ಮರಿಯನ್ನು ತಿನ್ನುತಿರುತ್ತದೆ. ಈ ದೃಶ್ಯವನ್ನು ಕಂಡು ಮರುಗಿದ ಸಿದ್ದಯ್ಯ ನಾಯಿಯನ್ನು ಓಡಿಸುತ್ತಾನೆ. ಈ ಮುಂಚೆಯೇ ತೆಂಗಿನ ಸಸಿ ನೆಡೆಲೆಂದು ಅಗೆದಿದ್ದ ಗುಂಡಿಯಲ್ಲಿ ಕೋತಿಯ ಕಳೇಬರಹವನ್ನು ಮಲಗಿಸುತ್ತಾನೆ.

ತನ್ನ ಸಮಾಜದಲ್ಲಿ ಮಾನವರು ಸತ್ತಾಗ ಯಾವ ವಿಧಿ ವಿಧಾನದಲ್ಲಿ ಶವ ಸಂಸ್ಕಾರ ನಡಿಯುತ್ತದೆಯೋ ಅದೇ ರೀತಿಯಲ್ಲಿ - ಕೋತಿಯ ತಲೆಯನ್ನು ದಕ್ಷಿಣ ದಿಕ್ಕಿಗೆ ಮಲಗಿಸಿ ಮಣ್ಣು ಮುಚ್ಚಿ. ಸಮಾದಿಯ ಮೇಲೆ ಬಾಳೆ ಎಲೆಯನ್ನು ಇಟ್ಟು ಅದರಲ್ಲಿ ಹರಿಶಿನ, ಕುಂಕುಮ, ಕಡಲೆಪುರಿ ಮತ್ತು ನೀರನ್ನು ಇಟ್ಟು ಪೂಜೆ ಮಾಡುತ್ತಾನೆ. ಎಲ್ಲ ಮುಗಿದ ನಂತರ ತಾನು ಸ್ನಾನ ಮಾಡುತ್ತಾನೆ. ಕೋತಿಗೂ ಸಹ ಈ ರೀತಿ ಯಾಕೆ ಶವ ಸಂಸ್ಕಾರ ಮಾಡಿದಿರಿ ಎಂದು ಕೇಳಿದಕ್ಕೆ ಆತನ ಉತ್ತರ- "ಬಹಳ ಹಿಂದೆ ಭೂಮಿಯ ಎಲ್ಲ ಭಾಗ ಕಾಡಾಗಿತ್ತು, ಅದು ವನಪಾಲಕರಿಗೆ ಸೇರಿತ್ತು. ವನಪಾಲಕರೇ ಕಾಡನ್ನು ಕಾಪಾಡುತಿದ್ದರು, ಸಂರಕ್ಷಿಸುತ್ತಿದರು, ಒಮ್ಮೆ ಅವರಿಗೆ ರಾಕ್ಷಸರ ಹಾವಳಿ ಹೆಚ್ಚಾಯಿತು. ರಾಕ್ಷಸರ ಕಾಟದಿಂದ ಮುಕ್ತಿ ಹೊಂದುವ ಸಲುವಾಗಿ ವನಪಾಲಕರು ಭಗವಂತನ ಮೊರೆ ಹೋಗುತ್ತಾರೆ ಆಗ ಭಗವಂತ ನಾನು ರಾಕ್ಷಸರನ್ನು ರಾಮನ ಅವತಾರದಲ್ಲಿ ಬಂದು ಸಂಹಾರ ಮಾಡುತ್ತೇನೆ ಇದಕ್ಕೆ ಬದಲಾಗಿ ನೀವೆಲ್ಲರೂ ಮುಂದಿನ ಜನ್ಮದಲ್ಲಿ ಕೋತಿಗಳಾಗಿ ಹುಟ್ಟಬೇಕೆಂದು ಹೇಳುತ್ತಾನೆ ಅದಕ್ಕೊಪ್ಪಿದ ವನಪಾಲಕರು ಕೋತಿಗಳಾಗಿ ಜನ್ಮ ತಾಳಿ ಬದುಕುತ್ತಿದ್ದಾರೆ." ಈ ಕತೆಯನ್ನು ಸಿದ್ದಯ್ಯ ತನ್ನ ತಂದೆಯಿಂದ ಕೇಳಿ ತಿಳಿದಿದ್ದಂತೆ. ಮುಂದುವರೆದು "ಇತ್ತೀಚೆಗೆ ಕೋತಿಗಳಿಗೆ ತಿನ್ನಲು ಯಾವುದೇ ನೈಸರ್ಗಿಕವಾದ ಆಹಾರಗಳಿಲ್ಲ, ಮರ-ಗಿಡಗಳಿಲ್ಲ, ಎಲ್ಲವನ್ನು ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಹಾಳು ಮಾಡುತ್ತಿದ್ದಾನೆ ಆದ ಕಾರಣ ಅವು ಆಹಾರ ಅರಸಿ ಮನೆಗಳಿಗೆ ಬಂದು ಉಪಟಳ ನೀಡುತ್ತಿವೆ" ಎಂದು ಹೇಳಿ ಸಿದ್ದಯ್ಯ ಸುಮ್ಮನಾದ.

ಕಳೆದ ಒಂದೂವರೆ ವರ್ಷದಿಂದ ನಾನು ಮಂಡಕಳ್ಳಿ ಗ್ರಾಮದಲ್ಲಿ ಬಾನೆಟ್ ಕೋತಿಗಳ ಬಗ್ಗೆ ಸಂಶೋಧನೆ ಮಾಡುತಿದ್ದೇನೆ, ಈ ಗ್ರಾಮದ ಸುತ್ತಮುತ್ತ ಯಾವುದು ಕಾಡುಗಳಿಲ್ಲ ನಿಜ, ಆದರೆ ಮಂಡಕಳ್ಳಿ ಅರ್ಬನ್ ಇಕಾಲಜಿ ಹೊಂದಿರುವ ಅದ್ಭುತ ತಾಣ. ಇಲ್ಲಿನ ಕೆರೆ, ತೋಟ, ಗದ್ದೆಗಳು, ಹಲವು ಪಕ್ಷಿ, ಪ್ರಾಣಿ, ಸರಿಸೃಪಗಳಿಗೆ ವಾಸಸ್ಥಾನ, ಹಾಗೆಯೇ ಇದೆ ಗ್ರಾಮ ತನ್ನ ಒಡಲಲ್ಲಿ ಎರಡು ಬಾನೆಟ್ ಕೋತಿಗಳ ಗುಂಪಿಗೆ ಜಾಗ ನೀಡಿದೆ. ಕೋತಿಗಳನ್ನು ಕೊಲ್ಲುವ, ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವ ಈ ಯುಗದಲ್ಲಿ ಮಂಡಕಳ್ಳಿಯ ಸಿದ್ದಯ್ಯ ಮತ್ತು ಇಲ್ಲಿನ ನಿವಾಸಿಗಳು ಕೋತಿಗಳನ್ನು ತಮಂತೇಹೇ ಎಂದು ಭಾವಿಸಿ ಸಹಬಾಳ್ವೆ ನಡೆಸುತ್ತಿದಾರೆ.

ನಗರೀಕರಣದತ್ತ ದಾಪುಗಾಲಕ್ಕುತ್ತಿರುವ ಮೈಸೂರು, ಈ ಮಂಡಕಳ್ಳಿ ಗ್ರಾಮವನ್ನು ಸಹ ಇನ್ನು ಕೆಲ ವರ್ಷಗಳಲ್ಲಿ ತನ್ನ ತೆಕ್ಕೆಗೆ ತೆಗೆಂದುಕೊಂಡು ಪ್ರಾಣಿ, ಪಕ್ಷಿ ಮತ್ತು ಕೇವಲ ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತವಾಗಿರುವ ಈ ಬಾನೆಟ್ ಕೋತಿಗಳ ಮನೆಯನ್ನು ನಾಶಮಾಡುವತ್ತ ನಿಧಾನಕ್ಕೆ ತೆವಳುತಿದ್ದೆ.

ಇದಕ್ಕೆ ಪೂರಕವೆಂಬಂತೆ ಸರ್ಕಾರ ಕೂಡ ಇದೆ ಗ್ರಾಮದ ಪಕ್ಕದಲ್ಲಿರುವ ವಿಮಾನ ನಿಲ್ದಾಣವನ್ನು ಉನ್ನತ ಮಟ್ಟಕೆ ಅಭಿವೃದಿಪಡಿಸುವ ಯೋಜನೆಗೆ ಅಂಗೀಕಾರ ನೀಡಿದೆ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳಿಂದ ಇಲ್ಲಿನ ಕೃಷಿ ಭೂಮಿಗಳು ಸೈಟ್ಗಳಾಗಿ ಪರಿವರ್ತನೆಗೊಳ್ಳುತ್ತಿವೆ.



ಚಿತ್ರ ಕೃಪೆ: ಸೂರಜ್ ಎನ್

ಚಿತ್ರ: ಸಿದ್ದಯ್ಯ ಕೋತಿಯ ಸಮಾದಿಯ ಮುಂದೆ

ಸಿದ್ದಯ್ಯನ ಕಥೆಯಂತೆ ಹಿಂದೆ ರಾಕ್ಷಸರಿಂದ ತೊಂದರೆಗೆ ಒಳಗಾದ ವನಪಾಲಕಾರು, ಇಂದು ಅಭಿವೃದಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳೆಂಬ ಕಲಿಯುಗದ ರಾಕ್ಷಸರಿಂದ ಬಾನೆಟ್ ಕೋತಿಗಳು ತಮ್ಮ ವಾಸಸ್ಥಾನವನ್ನು ಕಳೆದುಕೊಳ್ಳುತ್ತಿವೆ. ವಿಪರ್ಯಾಸವೆಂದರೇ ಯಾವ ಹುಲಿ, ಆನೆ, ಚಿರತೆಗಳಿಗೆ, "ಭಾರತೀಯ ವನ್ಯ ಜೀವಿ ಕಾಯ್ದೆ ೧೯೭೨" ಪ್ರಕಾರ ಶೆಡ್ಯೂಲ್ ೧ ಸ್ಥಾನಮಾನ ನೀಡಿದ್ದೇವೆ, ಅದೇ ಶೆಡ್ಯೂಲ್ ೧ ಸ್ಥಾನಮಾನಕ್ಕೆ ಬಾನೆಟ್ ಕೋತಿಗಳು ಸಹ ಸೇರಿವೆ. ಹುಲಿ ಸತ್ತಾಗ ಮಾತನಾಡುವ ಮಾನವ ಅದೇ ಸ್ಥಾನಮಾನ ಹೊಂದಿರುವ ಬಾನೆಟ್ ಕೋತಿ ಸತ್ತರೆ ಸುಮ್ಮನಾಗಿ ಬಿಡುತ್ತಾನೆ. ಒಂದೆಡೆ ವಿಷಪ್ರಾಶನದಿಂದ ಸತ್ತರೆ ಇನ್ನೊಂದೆಡೆ ಹೆಚ್ಚುತ್ತಿರುವ ಬೀದಿನಾಯಿಗಳಿಂದ ದಾಳಿಗೊಳಗಾಗಿ ಸಾಯುತ್ತಿವೆ.

ಒಟ್ಟಿನಲ್ಲಿ ಹನುಮಂತನ ಸ್ವರೂಪವಾದ ಕೋತಿಗೆ ತನ್ನ ನೆಲದಲ್ಲೇ ಉಳಿಗಾಲವಿಲ್ಲ...!

ಕೃತಜ್ಞತೆ: - ಸೌರಭ್ ಆನಂದ್, ಅಧ್ಯಾಪಕರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಬೆಂಗಳೂರು.

::::::::::::::::::::::::::::::::::::::::::::::::

**ಸೂರಜ್ ಎನ್**
**ಪ್ರೈಮಟಾಲಜಿಸ್ಟ್ ,**
**ಸ್ವತಂತ್ರ ವನ್ಯ ಜೀವಿ ಸಂಶೋಧಕ, ಮೈಸೂರು**
**ಇಮೇಲ್: surajprimates@gmail.com**